# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ದಾವಣಗೆರೆ.

## ಎಸ್.ಸಿ. ಸಂಖ್ಯೆಃ 235/2022

ಫಿರ್ಯಾದುದಾರರುಃ ಕರ್ನಾಟಕ ಸರ್ಕಾರದ ಪರವಾಗಿ ಆರಕ್ಷಕ ಉಪನಿರೀಕ್ಷಕರು, ದಾವಣಗೆರೆ ಬಡಾವಣೆ ಪೋಲೀಸ್ ಠಾಣೆ.

-ವಿರುದ್ಧ-

ಆರೋಪಿಃ- ಶಂಕರ್ ಎಸ್.ಜೆ ತಂದೆ ಶಾಮನೂರು ಜಯಣ್ಣ.

. . . . .

-ದೋಷಾರೋಪಣೆ-

ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ, ಬಿ.ಕಾಂ., ಎಲ್.ಎಲ್.ಎಂ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದಾವಣಗೆರೆ ಆದ ನಾನು, ಈ ಕೆಳಕಂಡ ಆರೋಪಿತನಾದಃ-

> ಶಂಕರ್ ಎಸ್.ಜೆ ತಂದೆ ಶಾಮನೂರು ಜಯಣ್ಣ, ವಯಸ್ಸು 44 ವರ್ಷ, ವೃತ್ತಿಃ ವ್ಯಾಪಾರ, ವಾಸಃ ಬೆಲ್ ವೈಟ್ ಸೋನಯರ್ ಅಪಾರ್ಟ್‌ಮೆಂಟ್, ಪ್ಲಾಟ್ ನಂ.ಎ313, 4 ನೇ ಬ್ಲಾಕ್, 7 ನೇ ಮೇನ್, ವಿದ್ಯಾರಣ್ಯಪುರಂ, ಬೆಂಗಳೂರು.

ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಿಸುತ್ತೇನೆಃ-

ಮೊದಲನೇಯದಾಗಿ, ಆರೋಪಿತನಾದ ನೀನು ಯಾವುದೋ ದುರುದ್ದೇಶ ಇಟ್ಟುಕೊಂಡು ದಿನಾಂಕ 30.07.2018 ರಂದು ಬೆಳಿಗ್ಗಿನ ಜಾವ 02.30 ಗಂಟೆಯ ಸಮಯದಲ್ಲಿ ಎಂ.ಸಿ.ಸಿ. ಬಿ ಬ್ಲಾಕ್ ನಲ್ಲಿರುವ ಎಸ್.ಎಸ್ ಶಿವ ಪಾರ್ವತಿ ಎಸ್.ಎಸ್. ಮಲ್ಲಿಕಾರ್ಜುನ ರವರ ಮನೆಯ ಮುಂದಿನ ಗೇಟ್ ಬಳಿ ಆರೋಪಿತನಾದ ನೀನು ಎಲ್ಲಿಂದಲೋ ಪೆಟ್ರೋಲ್‌ನ್ನು ತಂದು ಗೇಟ್ ಬಳಿ ಹಾಕಿ ಬೆಂಕಿ ಕಡ್ಡಿ ಗೀರಿ ಬೆಂಕಿ ಹಚ್ಚಿ ಓಡಿ ಹೋಗಿರುತ್ತೀರಿ. ಆ ಮೂಲಕ ಆರೋಪಿತನಾದ ನೀನು ಭಾರತ ದಂಡ ಸಂಹಿತೆಯ ಕಲಂ 436 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಕೊನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಮೇಲ್ಕಂಡ ಘಟನೆಗೆ ಮುಂದುವರೆದು, ಆರೋಪಿತನಾದ ನೀನು ಎಂ.ಸಿ.ಸಿ. ಬಿ ಬ್ಲಾಕ್ ನಲ್ಲಿರುವ ಎಸ್.ಎಸ್ ಶಿವ ಪಾರ್ವತಿ ಎಸ್.ಎಸ್. ಮಲ್ಲಿಕಾರ್ಜುನ ರವರ ಮನೆಯ ಮುಂದಿನ ಗೇಟ್

ಬಳಿ ಪೆಟ್ರೋಲ್ ಹಾಕಿ ಬೆಂಕಿ ಕಡ್ಡಿ ಗೀರಿ ಬೆಂಕಿ ಹಚ್ಚಲು ಪ್ರಯತ್ನಿಸಿದ್ದು, ಆ ಮೂಲಕ ಆರೋಪಿತನಾದ ನೀನು ಭಾರತ ದಂಡ ಸಂಹಿತೆಯ ಕಲಂ 511 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮತ್ತು ಆರೋಪಿತನಾದ ನೀನು ಮೇಲೆ ಹೇಳಿದ ಆರೋಪಕ್ಕೆ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 9 ನೇ ದಿವಸ ಜುಲೈ ಮಾಹೆಯ 2024 ನೇ ಇಸವಿಯಂದು.

(ರಾಜೇಶ್ವರಿ ಎನ್. ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

<u>ಆರೋಪಿ:- ಶಂಕರ್ ಎಸ್.ಜೆ ತಂದೆ ಶಾಮನೂರು ಜಯಣ್ಣ.</u>

<u>ಆರೋಪಿಯ ಆಪಾದನೆ</u>

ಪ್ರಶ್ನೆ ೧: ನಿಮಗೆ ಈಗ ಓದಿ ವಿವರಿಸಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೇ?

ಉತ್ತರ:

ಪ್ರಶ್ನೆ ೨: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಲು ಬಯಸುವಿರಾ?

ಉತ್ತರ:

(ದಿನಾಂಕ 9 ನೇ ದಿವಸ ಜುಲೈ ಮಾಹೆಯ 2024 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿತನಿಗೆ ದೋಷಾರೋಪಣೆಯನ್ನು ಓದಿ ಹೇಳಿ ನಂತರ ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು).

**(ರಾಜೇಶ್ವರಿ ಎನ್. ಹೆಗಡೆ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.